**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,</u>**
**<u>ಉಡುಪಿ ಜಿಲ್ಲೆ , ಉಡುಪಿ</u>**

<u>ಸ್ಪೆಷಲ್ ಕೇಸ್ ನಂಃ 54/2022</u> <u>ಪಿ.ಡಬ್ಲ್ಯೂಃ 3</u>

<u>ಸಿ.ಡಬ್ಲ್ಯೂಃ 10</u>

| | |
|---|---|
| ಸಾಕ್ಷಿದಾರರ ಹೆಸರು | ಕುಶಾಲಿನಿ |
| ತಂದೆಯ ಹೆಸರು | ವಾಸು ಕೆ. |
| ವಯಸ್ಸು | 38 ವರ್ಷ |
| ಉದ್ಯೋಗ | ಪಿ.ಡಿ.ಓ., ನಂದಳಿಕೆ ಗ್ರಾಮ ಪಂಚಾಯಿತಿ |
| ವಿಳಾಸ | ಸುಭಾಸ್ ನಗರ, ಕುರ್ಕಾಲು |

ದಿನಾಂಕಃ 24-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1) ನವಂಬರ್ -2016 ರಿಂದ ಆಗಸ್ಟ್-2022 ರವರೆಗೆ ಬಡಾ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದೇನೆ. ಚಾಸಾ - 6, ಬಿಲ್ ಕಲೆಕ್ಟರ್ ಆಗಿದ್ದರು. ನನಗೆ ಚಾಸಾ-7 ಮತ್ತು 8 ಗೊತ್ತು. ಅವರು ನಮ್ಮ ಸಿಬ್ಬಂದಿ, ಚಾಸಾ-7 ಇವರು ಪಂಪ್ ಆಪರೇಟರ್ ಆಗಿ, ಚಾಸಾ-8 ಇವರು ದ್ವಿ ದರ್ಜೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.

2) ನಮ್ಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ದಿನಾಂಕ 01-10-2021 ರಿಂದ ಕಸ ವಿಲೇವಾರಿ ಘಟಕ ಆರಂಭಿಸಿತ್ತು. ಸದರಿ ಘಟಕ ಪಂಚಾಯಿತಿಯ ಸಂತೆ ಮಾರ್ಕೆಟ್ ಬಳಿ ಇತ್ತು. ಅದನ್ನು ಸರಕಾರದ ಆದೇಶದಂತೆ ಆರಂಭಿಸಿತ್ತು. ಅದಕ್ಕಾಗಿ ಪಂಚಾಯಿತಿಯಲ್ಲಿ ತಿರ್ಮಾನ ಸಹ ಆಗಿತ್ತು. ಅದನ್ನು ನಡೆಸಲು ಶರಣ್ಯ ಎನ್ನುವವರಿಗೆ ಪಂಚಾಯಿತಿಯ ನಿರ್ಣಯದಂತೆ ಆರಂಭವಾಗುವ ಸಮಯದಲ್ಲಿಯೇ ಗುತ್ತಿಗೆ ನೀಡಿತ್ತು. ಅದಕ್ಕಾಗಿ ಮನೆಗಳಿಂದ ಕಸವನ್ನು ಸಂಗ್ರಹಿಸುವ ಜವಾಬ್ದಾರಿ ಗುತ್ತಿಗೆದಾರರಿಗೆ ಬಿಟ್ಟಿತ್ತು. ಅದಕ್ಕಾಗಿ ಅವರಿಗೆ ಸಿಬ್ಬಂದಿಗಳನ್ನು ಇಟ್ಟುಕೊಳ್ಳಲು ಅವಕಾಶ ಇತ್ತು. ಅವರ ಕೆಲಸಕ್ಕೆ ಬೇಕಾಗುವ ವಾಹನವನ್ನು ಪಂಚಾಯಿತಿಯ ಖರ್ಚಿನಲ್ಲಿ ಕೊಟ್ಟಿತ್ತು. ಆ

ವಾಹನದ ಚಾಲಕ ಚಾಸಾ-2. ಚಾಸಾ-1, ಕಸ ನಿರ್ವಹಣಾ ಘಟಕದ ಸಹಾಯಕಿಯಾಗಿದ್ದರು. ಚಾ ಸಾ-1, ಶರಣ್ಯ ಇವರ ತಾಯಿ. ಚಾಸಾ -3 ಮತ್ತು 4 ಇವರನ್ನು ಚಾಸಾ-1 ಇವರು ಘಟಕದ ಕೆಲಸಕ್ಕಾಗಿ ನೇಮಿಸಿಕೊಂಡಿದ್ದರು.

3) ಮನೆಗಳಿಂದ ಸಂಗ್ರಹಿಸಿದ ಕಸವನ್ನು ತಂದು ವಿಲೇವಾರಿ ಘಟಕದಲ್ಲಿ ಬೇರ್ಪಡಿಸಿ, ಒಣ ಕಸವನ್ನು ನಿಟ್ಟೆಯ ಎಂ.ಆರ್.ಎಫ್ ಘಟಕಕ್ಕೆ ಸಾಗಿಸುತ್ತಿದ್ದರು. ಹಸಿ ಕಸವನ್ನು ಅಲ್ಲಿ ಗೊಬ್ಬರ ಮಾಡಲು ಬಳಸುತ್ತಿದ್ದರು. ಎಂ.ಆರ್.ಎಫ್ ಘಟಕ ಪಡೆಯದೇ ಇದ್ದ ಕಸ ಮತ್ತು ಗೊಬ್ಬರವಾಗದೇ ಇದ್ದ ತ್ಯಾಜ್ಯವನ್ನು ಚೀಲಗಳಲ್ಲಿ ತುಂಬಿ, ಅಲ್ಲಿಯೇ ಇಟ್ಟಿತ್ತು. ಸದರಿ ಘಟಕದ ಕಾರ್ಯನಿರ್ವಹಣೆಯಿಂದ ತೊಂದರೆ ಆಗುತ್ತಿರುವುದಾಗಿ ಸಾರ್ವಜನಿಕರ ದೂರುಗಳು ಇತ್ತು. ಈ ವಿಷಯವಾಗಿ ಪಂಚಾಯಿತಿಯ ಮೀಟಿಂಗ್ ನಲ್ಲೂ ಸಹ ವಿಷಯ ತೆಗೆದಿದ್ದರು. ಈ ವಿಷಯವನ್ನು ತಹಶೀಲ್ದಾರ್ ರವರ ಗಮನಕ್ಕೆ ತಂದು ಕಸವಿಲೇವಾರಿಗಾಗಿ ಬೇರೆ ಜಾಗವನ್ನು ನೀಡಲು ಕೋರಿತ್ತು. ಅದಕ್ಕಾಗಿ ತಹಶೀಲ್ದಾರ್ ರವರು ಸರ್ವೆಯವರ ಸಹಾಯದೊಂದಿಗೆ ಪೊಲ್ಯದ ಸರ್ವೆ ನಂಬ್ರ 164/2 ರ 50 ಸೆಂಟ್ಸಗಳ ಜಮೀನನ್ನು ಕಸವಿಲೇವಾರಿಗಾಗಿ ಗುರುತಿಸಿದ್ದರು. ಅದಕ್ಕಾಗಿ ನಕಾಶೆಯನ್ನು ಸಹ ಮಾಡಿಕೊಟ್ಟಿದ್ದರು. ಸದರಿ ಗುರುತಿಸಿದ ಜಾಗೆಯಲ್ಲಿ ಸಂತೆ ಮಾರ್ಕೇಟ್ ಬಳಿ ಶೇಖರಿಸಿ ಇಟ್ಟಿದ್ದ ತ್ಯಾಜ್ಯವನ್ನು ಹೊಸದಾಗಿ ಗುರುತಿಸಿದ ಜಾಗಕ್ಕೆ ಸ್ಥಳಾಂತರಿಸಲು ಚಾಸಾ -1 ಇವರಿಗೆ ಸೂಚಿಸಿದ್ದೆ. ಅದಕ್ಕಾಗಿ ತಾರೀಕು 24-02-2022 ರಂದು ತಿಳಿಸಿದ್ದೆ.

4) ದಿನಾಂಕ 25-02-2022 ರಂದು ಚಾಸಾ-1 ಇವರು ಬೆಳಗ್ಗಿನ 8-45 ರ ಸಮಯಕ್ಕೆ ನನಗೆ ಪೋನ್ ಮಾಡಿದ್ದರು. ಆಗ ಕಸ ಹಾಕುವಲ್ಲಿ ಆರೋಪಿ ಗಲಾಟೆ ಮಾಡುತ್ತಿದ್ದಾರೆಂದು ಹೇಳಿದ್ದರು. ಆಗ ಪೋನ್ ಡಿಸ್ ಕನೆಕ್ಟ ಆಗಿತ್ತು. ಅದಕ್ಕಾಗಿ ನಾನು ಚಾಸಾ-6 ಇವರಿಗೆ ಆ ಜಾಗೆಗೆ ಹೋಗಿ ಏನಾಗಿದೆ ಎಂದು ನೋಡಬೇಕೆಂದು ಹೇಳಿದ್ದೆ. ನಂತರ ನನಗೆ ಹೊಸದಾಗಿ ಗುರುತಿಸಿದ ಜಾಗೆಯಲ್ಲಿ ಕಸ ಹಾಕಲು ತೊಂದರೆ ಮಾಡುತ್ತಿರುವುದಾಗಿ ತಿಳಿದಿತ್ತು. ಅದಕ್ಕಾಗಿ ನಾನು ಪೊಲೀಸರಿಗೆ ಮಾಹಿತಿ ಕೊಟ್ಟಿದ್ದೆ. ನಾನು ಚಾಸಾ -8 ಇವರೊಂದಿಗೆ ಆ ಜಾಗೆಗೆ ಹೋಗಿದ್ದೆ. ಅಲ್ಲಿ ಚಾಸಾ-1 ರಿಂದ 4, ಸಾರ್ವಜನಿಕರು, ಮತ್ತು ನಮ್ಮ ಸಿಬ್ಬಂದಿಗಳು ಇದ್ದರು. ನಾನು ವಿಚಾರಿಸಿದಾಗ ಚಾಸಾ-

1, ಅಲ್ಲಿಗೆ ಕಸ ಮತ್ತು ಸಿಬ್ಬಂದಿಗಳೊಂದಿಗೆ ಕಸವಿಲೇವಾರಿ ಮಾಡುತ್ತಿದ್ದಾಗ ಬಂದಿದ್ದ ಆರೋಪಿ ಬಂದು ''ಈ ಜಾಗದಲ್ಲಿ ನಿಮಗೆ ಕಸ ಹಾಕಲು ಹೇಳಿದವರು ಯಾರು ಎಂದು ಹೇಳಿ, ಸೂಳೇ, ರಂಡೇ ಎಂದು ಬೈದು, ನಿಮಗೆ ಕೀಳು ಜಾತಿಯವರಿಗೆ ಈ ಕೆಲಸ ಬಿಟ್ಟು ಬೇರೆ ಯಾವುದೇ ಕೆಲಸ ಸಿಗುವುದಿಲ್ಲವಾ'' ಎಂದು ಹೇಳಿ, ಅವರ ಫೋನ್‌ನ್ನು ಬಿಸಾಡಿ, ಚಾಸಾ-1 ಇವರಿಗೆ ಹಲ್ಲೆ ಮಾಡಿದ್ದರು ಎಂದು ಹೇಳಿದ್ದರು. ಇನ್ನು ಈ ಜಾಗೆಗೆ ಬಂದರೆ ಕೈ ಕಾಲು ಮುರಿದು ಹಾಕುವುದಾಗಿ ಬೆದರಿಕೆ ಹಾಕಿದ್ದರು ಎಂದು ಹೇಳಿದ್ದರು.

5) ಆದಿನ ಪುನಃ ಕಸದ ಮೂಟೆಗಳನ್ನು ಅಲ್ಲಿಂದ ತಂದು ಹಳೆಯ ಜಾಗದಲ್ಲಿ ಇಟ್ಟಿತ್ತು. ಆದಿನ ಚಾಸಾ-1 ಆಸ್ಪತ್ರೆ ಹೋಗಿ ಉಪಚಾರ ಪಡೆದಿದ್ದರು ಎಂದು ತಿಳಿದಿತ್ತು. ತನಿಖಾಧಿಕಾರಿಗಳು ನನ್ನನ್ನು ವಿಚಾರಿಸಿ, ಕಸವಿಲೇವಾರಿ ಘಟಕದ ಮಾಹಿತಿ ಮತ್ತು ದಾಖಲೆಗಳನ್ನು ಕೋರಿ ಪತ್ರ ಬರೆದಿದ್ದರು.

(ಈ ಹಂತದಲ್ಲಿ ಸಮಯ 2-10 ಗಂಟೆ ಆಗಿದ್ದರಿಂದ ಮುಂದಿನ ಮುಖ್ಯವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು)

ಸಾಕ್ಷಿಯನ್ನು ಮಧ್ಯಾಹ್ನ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಮುಖ್ಯವಿಚಾರಣೆ: ಸರಕಾರಿ ಅಭಿಯೋಜಕರಿಂದ**

6) ತನಿಖಾಧಿಕಾರಿಗೆ ತಾರೀಕು 11-03-2022 ರಂದು ಒದಗಿಸಿದ ಮಾಹಿತಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-8 ಎಂದು, ಅದರಲ್ಲಿಯ ನನ್ನ ಸಹಿಯನ್ನು ಈಗ ನೋಡಿ ಅದನ್ನು ನಿಶಾನೆ ಪಿ-8(ಎ) ಎಂದು ಗುರುತಿಸಿದ್ದೇನೆ. ಅದರೊಂದಿಗೆ ಜಿಲ್ಲಾ ಪಂಚಾಯಿತಿಯ ತಾರೀಕು 03-08-2021 ರ ಪತ್ರ, ದಿ: 06-11-2019 ರ ಪತ್ರ ಮತ್ತು ಸರಕಾರದ ನಡವಳಿಕೆಗಳು, ತಾರೀಕು 18-09-2021 ರ ಪಂಚಾಯಿತಿಯ ನಡವಳಿಕೆ, ತಾರೀಕು 23-07-2021 ರ ಜಿಲ್ಲಾ ಪಂಚಾಯಿತಿಯ ಪತ್ರ , ದಿ: 26-08-2021 ರ ಗ್ರಾಮ ಪಂಚಾಯಿತಿಯ ಕೋರಿಕೆ, ದಿ: 17-12-2019 ರ ಜಿಲ್ಲಾ ಪಂಚ್ಯಾತ್ ಇವರ ಪತ್ರ, ಕಸವಿಲೇವಾರಿ ಘಟಕದ ಸಿಬ್ಬಂದಿ ವಿವರ, ಕರ್ನಾಟಕ ಸರಕಾರದ ನಡವಳಿಕೆಗಳು, ನಮ್ಮ ಪಂಚ್ಯಾತಿಯ ಕಸ ನೀಡುವ ಮನೆಗಳು,

ತ್ಯಾಜ್ಯ ನಿರ್ವಹಣೆಯ ಕೈಪಿಡಿ, ಪ್ರಮಾಣ ಪತ್ರ, ಸಂಘದ ಒಪ್ಪಿಗೆ ಪತ್ರ, ತಾಃ 28-01-2022 ರ ತಾಲೂಕು ಪಂಚಾಯಿತಿಯ ಪತ್ರ, ತಾಃ 18-01-2022 ರ ಪಂಚ್ಯಾತಿಯ ಪತ್ರ , ಕಸ ಹಾಕಲು ಗುರುತಿಸಿದ ಹೊಸ ಜಾಗೆಯ 7 ಪೋಟೋಗಳು, ಆ ಜಾಗೆಯ ಪಿ.ಪಿ.ಟಿ ಶೀಟ್ , ಸರ್ವೆ ನಂಬ್ರ 164/2 ನೇದರ ರೆಕಾರ್ಡ್ ಆಪ್ ರೈಟ್ಸ್ , ಬಡಾ ಗ್ರಾಮದ 2 ನೇ ವಾರ್ಡಿನ ಗ್ರಾಮಸ್ಥರಿಂದ ಬಂದ ತಾಃ 28-02-2022 ರ ಅರ್ಜಿ, ತಾಃ 11-03-2022 ರಂದು ಚಾಸಾ-1 ಕೊಟ್ಟ ದೂರಿನ ಬಗ್ಗೆ ತನಿಖಾಧಿಕಾರಿಗೆ ಪಂಚ್ಯಾತಿಯಿಂದ ಕೊಟ್ಟ ಮಾಹಿತಿ, ತಾಃ 18-01-2022 ರಂದು ತಹಶೀಲ್ದಾರ್ ಗೆ ಬರೆದ ಪತ್ರ, ಮತ್ತು ಲಗತ್ತು, ಪೋಟೋಗಳನ್ನು ಸಹ ಒದಗಿಸಿದ್ದೆ. ಈಗ ಅವುಗಳನ್ನು ನೋಡಿ ಗುರುತಿಸಿದ್ದೇನೆ. ಅವುಗಳನ್ನು ಒಟ್ಟಾಗಿ ನಿಶಾನೆ ಪಿ-9 (61 ಹಾಳೆಗಳು) ಎಂದು ಗುರುತಿಸಿದ್ದೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಟಿ.ವಿ.ಕೆ.ಎಸ್ ವಕೀಲರಿಂದ**

1) ನಿಪಿ-9 ರ ತಾರೀಕು 28-02-2022 ರ ಅರ್ಜಿಯಲ್ಲಿ ಅಹಮದ್ ಬ್ಯಾರಿಯವರ ಹೆಸರು ಇದೆ ಎಂದರೆ, ರೆಕಾರ್ಡ್ ಆಪ್ ರೈಟ್ಸ ನ ಕೊನೆಯ ಕಾಲಂನಲ್ಲಿದೆ. ನಾನು ಸರ್ವೆ ನಂಬ್ರ 164/2 ರ ಜಾಗೆಗೆ ಹೋಗಿದ್ದೇನೆ. ಅಲ್ಲಿ ಕೆರೆ ಇಲ್ಲ. ಅಲ್ಲಿ ಕೆರೆ ಇದೆ, ನಾನು ಕೆರೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ, ಅದು ಕಂದಾಯ ಇಲಾಖೆಗೆ ಸೇರಿದ್ದಾಗಿದೆ, ನಾನು ಆ ಜಾಗೆಯಲ್ಲಿ ಹೋದಾಗ ನನಗೆ ಕೆರೆ ಗೋಚರವಾಗಿಲ್ಲ. ತಾರೀಕು 23-02-2022 ರಂದು ನಾನು ಸರ್ವೆ ನಂಬ್ರ 164/2 ರ ಜಾಗೆಗೆ ಹೋದಾಗ ಅಲ್ಲಿ ಚಾಸಾ -1 ಮತ್ತು ಶರಣ್ಯ ಬಂದಿದ್ದ ಬಗ್ಗೆ ಹೇಳಿಲ್ಲ ಎಂದರೆ ನಿಜ. ಆದಿನ ನಾನು ಅಲ್ಲಿಗೆ ಹೋಗಿದ್ದಕ್ಕಾಗಿ ಮಹಜರು ಮಾಡಲು ತೊಂದರೆ ಇತ್ತಾ ಎಂದರೆ, ಇಲ್ಲ. ನಾನು ಆ ದಿನ ಹೋಗುವ ಮೊದಲು ಅಕ್ಕಪಕ್ಕದ ಮಾಲೀಕರಿಗೆ ನೋಟಿಸು ಕೊಟ್ಟಿಲ್ಲ. ಸರ್ವೆ ನಂಬ್ರ 164/2 ರ ಜಾಗೆ ಕಾಂಕ್ರೀಟ್ ರಸ್ತೆಯಿಂದ ಎಷ್ಟು ದೂರದಲ್ಲಿದೆ ಎಂದರೆ, ಸುಮಾರು 100 ಮೀಟರ್ ಗಿಂತ ಕಡಿಮೆ ಅಂತರದಲ್ಲಿದೆ. ಆರೋಪಿಯ ಜಾಗೆಯನ್ನು ನಾನು ನೋಡಿಲ್ಲ.

2) ತಕ್ಷೀರು ಜಾಗೆಗೆ ನಾನು ಹೋದಾಗ ಸುಮಾರು ಬೆಳಗ್ಗಿನ 10.15 ರ ಸಮಯ. ಆಗ ಅಲ್ಲಿ ಸುಮಾರು 10-20 ಜನರು ಸೇರಿದ್ದರು. ಅಲ್ಲಿ ನಾನು ಜನರನ್ನು ವಿಚಾರಿಸಿಲ್ಲ, ಪೊಲೀಸರು ವಿಚಾರಿಸುತ್ತಿದ್ದರು. ಆದಿನ ಬಂದಿದ್ದ ಪೊಲೀಸರ rank ಏನೆಂದು ಗೊತ್ತಿಲ್ಲ. ಆದರೆ ಇನ್ಸಪೆಕ್ಟರ್ ಒಬ್ಬರು ಬಂದಿದ್ದರು. ಆದಿನ ಪೊಲೀಸರು ಚಾಸಾ-1 ಇವರನ್ನು ವಿಚಾರಣೆ ಮಾಡಿದ್ದರಾ ಎಂದರೆ, ಮಾಡುತ್ತಿದ್ದರು. ಚಾಸಾ-1 ಪೊಲೀಸರಿಗೆ ಏನು ಹೇಳಿಕೆ ಕೊಟ್ಟಿದ್ದರು ಎಂದು ಗೊತ್ತಿಲ್ಲ. ಆದಿನ ಗಾಡಿಯಿಂದ ಎಷ್ಟು ಗೋಣಿಗಳನ್ನು ಅನ್ ಲೋಡ್ ಮಾಡಿ ಎಲ್ಲಿ ಇಟ್ಟಿದ್ದರು ಎಂದು ಗೊತ್ತಿಲ್ಲ, ಆದರೆ ಅನ್ ಲೋಡ್ ಮಾಡಿದ್ದರು. ನಮ್ಮ ಸಮಕ್ಷಮದಲ್ಲಿ ಎಷ್ಟು ಚೀಲಗಳನ್ನು ಪುನಃ ಲೋಡ್ ಮಾಡಿದ್ದರು ಎಂದರೆ, ನಾವು ಅವರಿಗೆ ಅವುಗಳನ್ನು ಲೋಡ್ ಮಾಡಿಕೊಂಡು ಬರಲು ಸೂಚನೆ ಕೊಟ್ಟಿದ್ದೆ.

3) ಚಾಸಾ-1, ಅಲ್ಲಿ ಎಷ್ಟು ಮೂಟೆಗಳನ್ನು ಇಳಿಸಿತ್ತು ಎಂದು ನನ್ನ ಮುಂದೆ ಹೇಳಿಲ್ಲ. ಜಾಗವನ್ನು ಅಳತೆ ಮಾಡಲು ನಾನು ರಿಕ್ಷಾದಲ್ಲಿ ಹೋಗಿದ್ದೆವು. ಆದಿನ ಆಗ ರೀಲೋಡ್ ಮಾಡಿದ ಕಸದ ಚೀಲಗಳನ್ನು ಹಳೆಯ ಜಾಗಕ್ಕೆ ಹಾಕುವಾಗ ನಾನು ಆ ವಾಹನದೊಂದಿಗೆ ಹೋಗಿಲ್ಲ. ನನಗೆ ಈಗ ಓದಿ ಹೇಳಿದ ಹೇಳಿಕೆಯಂತೆ ಪೊಲೀಸರಿಗೆ ಹೇಳಿದ್ದೆನಾ ಎಂದರೆ, ನಾನು ನಂತರ ಅಲ್ಲಿಗೆ ಹೋಗಿದ್ದೇನೆ. ಓದಿ ಹೇಳಿದ ಹೇಳಿಕೆಯ ಭಾಗವನ್ನು **ನಿಶಾನೆ ಡಿ-1** ಎಂದು ಗುರುತಿಸಿದೆ. ಚಾಸಾ-1 ಮತ್ತು ಅವರ ಮಗಳು ಶರಣ್ಯನ್ನೊಂದಿಗೆ ಸರ್ವೆ ನಂಬ್ರ 164/2 ರ ಜಾಗೆಗೆ ಬಾರದೇ ಇದ್ದುದರಿಂದ ಅವರಿಗೆ ಕಸವನ್ನು ಹಾಕುವ ಜಾಗೆ ಯಾವುದೆಂದು ಗೊತ್ತಿಲ್ಲ ಎಂದರೆ ಸರಿಯಲ್ಲ. ಅವರು ಪೋಟೋಗಳಲ್ಲಿ ಇದ್ದಾರೆ. ನಾನು ತೋರಿಸಿದ ಪೋಟೋಗಳಲ್ಲಿ ಚಾಸಾ-1 ಇಲ್ಲ ಎಂದರೆ ಸರಿಯಲ್ಲ. ನಿಪಿ-9 ರ ಪೋಟೋಗಳಲ್ಲಿ ಸರ್ವೆಯರ್ ಯಾರು ಮತ್ತು ಚಾಸಾ-1 ಯಾರು ಎಂದು ಗುರುತಿಸಲು ಆಗುವುದಿಲ್ಲಾ ಎಂದರೆ, ಸದರಿ ಪೋಟೋಗಳಲ್ಲಿ ಸರ್ವೆಯರ್ ರವರ ಮುಖಗಳು ಕಾಣಿಸುತ್ತಿಲ್ಲ. ನಾವು ಬೇರೆ ಜಾಗೆಗೆ ಹೋಗಿ ನಿಪಿ-9 ರಲ್ಲಿ ಹೇಳಿದ ಪೋಟೋಗಳನ್ನು ಸೃಷ್ಟಿಸಿದೆ ಎಂದರೆ ಸರಿಯಲ್ಲ.

4) ನಾನು ಆದಿನ ಆರೋಪಿತನನ್ನು ಆ ಸ್ಥಳದಲ್ಲಿ ನೋಡಿಲ್ಲ. ಚಾಸಾ-1 ತಕ್ಷೀರು ಯಾವ ಜಾಗದಲ್ಲಿ ಆಗಿದೆ ಎಂದು ಹೇಳಿದ್ದಾರಾ ಎಂದರೆ, ಸರ್ವೆ ನಂಬ್ರ 164/2 ರ

ಜಾಗೆಗೆ ಹೋದಾಗ ಜಗಳ ಆಗಿದೆ ಎಂದು ಹೇಳಿದ್ದಾರೆ. ತಕ್ಷೀರು ಆಗಿದೆ ಎನ್ನುವ ದಿನಾಂಕದಂದು ನಾನು ಸರ್ವೆನಂಬ್ರ 164/2 ರ ಜಾಗೆಗೆ ಹೋಗಿದ್ದೆ. ಸಾಕ್ಷಿಗೆ ನಿಮ್ಮದು ಯಾವುದು ಸಮುದಾಯ ಎಂದು ಕೇಳಿದಾಗ, ಮುಂದಿನ ಪ್ರಶ್ನೆ ಕೇಳಲು ಹೇಳಿದ್ದು, ಸಾಕ್ಷಿ ಎಸ್ ಸಿ ಎಂದು ಹೇಳಿದ್ದನ್ನು ದಾಖಲಿಸಿಕೊಳ್ಳಲು ಹೇಳಿದ್ದರಿಂದ, ದಾಖಲಿಸಿದೆ.

5) ಆರೋಪಿಯ ಮೇಲೆ ಕೇಸು ದಾಖಲಾಗಿದೆ ಎಂದು ನನಗೆ ತಿಳಿದದ್ದು ಯಾವಾಗ ಎಂದರೆ, ಸರಿಯಾಗಿ ನೆನಪಿಲ್ಲ. ಕೇಸು ದಾಖಲಾಗಿದ್ದ ಬಗ್ಗೆ ನನಗೆ ತಿಳಿದದ್ದು ಯಾವಾಗ ಎಂದು ನನಗೆ ಸರಿಯಾಗಿ ನೆನಪಿಲ್ಲ. ಆರೋಪಿ ನನಗೆ ಪರಿಚಯ ಇಲ್ಲ. ಕಸವಿಲೇವಾರಿ ಮಾಡುವ ವಿಚಾರದಲ್ಲಿ ಆರೋಪಿಯು ಸಹ ಒಬ್ಬ ಬಿಡ್ಡರ್ ಎಂದರೆ, ನನಗೆ ಗೊತ್ತಿಲ್ಲ. ಅದೇ ಸಿಟ್ಟಿನಿಂದ ನಾನು ಚಾಸಾ-1 ಇವರೊಂದಿಗೆ ಸೇರಿಕೊಂಡು ಆರೋಪಿಯ ಮೇಲೆ ಒಂದು ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ನಮಗೆ ದೂರು ಬಂದಿದ್ದರಿಂದ ಕೈಗೊಳ್ಳಬೇಕಾದ ಕ್ರಮವನ್ನು ಕೈಗೊಂಡಿದ್ದೇವೆ. ನಾವು ಆರೋಪಿಯ ಮೇಲೆ ಏನು ಕ್ರಮ ಕೈಗೊಂಡಿದ್ದೇವೆ ಎಂದರೆ, ಅವರ ಮೇಲೆ ಈಗಾಗಲೇ ದೂರು ದಾಖಲಾಗಿದ್ದರಿಂದ ನಾವು ಕ್ರಮ ಕೈಗೊಳ್ಳುವ ಪ್ರಶ್ನೆ ಬರುವುದಿಲ್ಲ. ನಾನು ಕೇಳುವ ಪ್ರಶ್ನೆಗಳಿಗೆ ನಾನು ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಹಾಗೆ ಎಲ್ಲಿಯೂ ಯಾವ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಮಗೆ ಬೇಕಾದ ಹಾಗೆ ದಾಖಲೆಗಳನ್ನು ಸೃಷ್ಟಿಸಿ ತನಿಖಾಧಿಕಾರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ . ಈ ಪ್ರಕರಣಕ್ಕಾಗಿ ಪೋಟೋಗಳನ್ನು ಸೃಷ್ಟಿಸಿದೆ ಎಂದರೆ ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.